

ಅರುಣ ಪಿ. ಭಟ್ಟ




## ವಾರಭವಿಷ್ಯ: 26.12.2024ರಿಂದ 01.01.2025ರವರೆಗೆ




ವ್ಯವಹಾರದಲ್ಲಿನ ಎಲ್ಲಾ ಸಮಸ್ಯೆಗಳು ಕಡಿಮೆಯಾಗುತ್ತವೆ. ಯಶಸ್ಸು ಪಡೆಯುವ ಅವಕಾಶ ಹೆಚ್ಚಿದೆ. ಆದರೆ ಇದಕ್ಕಾಗಿ ಹೆಚ್ಚಿನ ಪರಿಶ್ರಮ ಹಾಕಬೇಕು. ವ್ಯಾಪಾರ ಮಾಡುತ್ತಿರುವವರಿಗೆ ಲಾಭದ ಪ್ರಮಾಣ ಹೆಚ್ಚಲಿದೆ. ವಾರಾಂತ್ಯದ ಹೊತ್ತಿಗೆ ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಸುವಿರಿ. ಆರೋಗ್ಯ ವಿಚಾರದಲ್ಲಿ ಈ ವಾರ ಅಷ್ಟೇನೂ ಉತ್ತಮವಾಗಿರುವುದಿಲ್ಲ. ಶುಭದಿನ: 29. ನವದುರ್ಗಾ ಆರಾಧನೆ ಮಾಡಿರಿ.




ಈವರೆಗೆ ಏನಾದರೂ ಸಮಸ್ಯೆಗಳು ಕಾಡುತ್ತಿದ್ದಲ್ಲಿ ನಿವಾರಣೆ ಆಗುತ್ತದೆ. ವಾರದ ಶುರುವಿನಲ್ಲಿ ಅದೃಷ್ಟ ನಿಮ್ಮ ಪಾಲಿಗೆ ಇರುತ್ತದೆ. ಉದ್ಯೋಗ ಸ್ಥಳದಲ್ಲೂ ನಿಮ್ಮ ಬಗ್ಗೆ ಗೌರವ ಹೆಚ್ಚಳವಾಗುತ್ತದೆ. ಸಹೋದ್ಯೋಗಿಗಳ ಪ್ರಗತಿಗೆ ಸಹಕಾರ ನೀಡಲಿದ್ದೀರಿ. ಅಗತ್ಯ ಇದ್ದವರಿಗೆ ಕೆಲಸ ಕೊಡಿಸಲು ಪ್ರಯತ್ನಿಸಲಿದ್ದೀರಿ. ನಿಮ್ಮ ಆರ್ಥಿಕ ಸ್ಥಿತಿಯನ್ನು ಸರಿಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಶುಭದಿನ: 01.ಶ್ರೀರಾಮರಕ್ಷಾ ಸ್ತೋತ್ರ ಪಠಣ ಮಾಡಿರಿ.





ವಾರದ ಶುರು ಉತ್ತಮವಾಗಿರುತ್ತದೆ. ಆಪ್ತರ ಬಾಂಧವ್ಯಕ್ಕೆ ಇನ್ನಷ್ಟು ಗಟ್ಟಿತನ ಬರುತ್ತದೆ. ಸುಮಧುರ ಕ್ಷಣಗಳನ್ನು ಕಳೆಯಲಿದ್ದೀರಿ. ಈ ಹಿಂದೆ ಕುಟುಂಬದಲ್ಲಿದ್ದ ಮನಸ್ತಾಪಗಳನ್ನು ದೂರ ಮಾಡುವುದಕ್ಕೆ ಪ್ರಯತ್ನ ಮಾಡಲಿದ್ದೀರಿ. ವೃತ್ತಿಪರ ಜವಾಬ್ದಾರಿಗಳನ್ನು ಪೂರೈಸುವುದಕ್ಕೆ ಹೆಚ್ಚು ಸಮಯ ಮೀಸಲಿಡಬೇಕಾಗುತ್ತದೆ. ಆರೋಗ್ಯ ಸ್ಥಿತಿ ಅಷ್ಟೇನೂ ಉತ್ತಮವಾಗಿ ಇರುವುದಿಲ್ಲ. ಶುಭದಿನ: 28. ಶಿವಕವಚ ಸ್ತುತಿಸಿರಿ.





ವಾರದ ಆರಂಭದಲ್ಲಿ ಸುಮಧುರ ಕ್ಷಣಗಳನ್ನು ಕಳೆಯಲಿದ್ದೀರಿ. ವಿವಾಹಿತರಿಗೆ ಸಂತುಷ್ಟವಾದ ಸಮಯ. ವ್ಯಾಪಾರ ಮಾಡುವವರಿಗೆ ಪದೋನ್ನತಿ ಇದೆ. ವಾರದ ದ್ವಿತೀಯಾರ್ಧದಲ್ಲಿ ಹಲವು ಗುರಿಗಳನ್ನು ಸಾಧಿಸುತ್ತೀರಿ. ವೃತ್ತಿಪರರು ಹೆಚ್ಚು ಕೆಲಸ ಮಾಡಲಿದ್ದೀರಿ. ಸಂಬಂಧಿಕರ ಜೊತೆ ಉತ್ತಮ ಬಾಂಧವ್ಯ ಇರುತ್ತದೆ.  ಈ ವಾರದಲ್ಲಿ ಮಿಶ್ರ ಫಲ ಅನುಭವಿಸಲಿದ್ದೀರಿ. ಶುಭದಿನ: 30. ಹನುಮಾನ್ ಚಾಲೀಸ್ ಓದಿರಿ.




ಕೌಟುಂಬಿಕ ವಿಷಯದಲ್ಲಿ ಉತ್ತಮವಾದ ಪ್ರಗತಿ. ನಿಮ್ಮ ವಿರೋಧಿಗಳು ಹೂಡಿರುವ ಷಡ್ಯಂತ್ರವನ್ನು ಮುರಿಯುವಲ್ಲಿ ಸಫಲರಾಗುವಿರಿ. ರಾಜಕಾರಣದಲ್ಲಿ ವಿರೋಧಿಗಳ ವಿರುದ್ಧ ನಿಮ್ಮ ಕೈ ಮೇಲಾಗಲಿದೆ. ಉದ್ಯೋಗಕ್ಕೆ ಸಂಬಂಧಿಸಿದ ಸಂದರ್ಶನಗಳಲ್ಲಿ ಯಶಸ್ಸು ದೊರೆಯಲಿದೆ. ಈ ವಾರ ಆರೋಗ್ಯದ ಸಮಸ್ಯೆಗಳು ಹೆಚ್ಚಾಗಿ ಕಾಡುವುದಿಲ್ಲ. ಶುಭದಿನ: 29. ವಿಷ್ಣು ಸಹಸ್ರನಾಮ ಪಠಿಸಿರಿ.





ವಾರದ ಶುರುವಿನಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯುತ್ತಮವಾದ ಪ್ರಗತಿ ಇದೆ. ಬರಹಗಾರರ ಬರವಣಿಗೆ ಮತ್ತಷ್ಟು ಆಕರ್ಷಕವಾಗಲಿದೆ. ಹಣಕಾಸು ಸಮಸ್ಯೆಗಳು ಬಗೆಹರಿಯುತ್ತವೆ. ವಾರದ ಮಧ್ಯ ಭಾಗದಲ್ಲಿ ನಾನಾ ಕಾರಣಗಳಿಗೆ ಚಿಂತೆ ಕಾಡುತ್ತದೆ. ಅನಾರೋಗ್ಯ ಸಮಸ್ಯೆಗಳು ಕಾಡಬಹುದು. ವಾರಾಂತ್ಯದ ತನಕ ಆರೋಗ್ಯ ಉತ್ತಮವಾಗುತ್ತದೆ. ಸಮಾಜದಲ್ಲಿ ನಿಮ್ಮ ವರ್ಚಸ್ಸು ಹೆಚ್ಚಲಿದೆ. ಶುಭದಿನ: 27. ಸೌಂದರ್ಯ ಲಹರಿ ಪಠಿಸಿರಿ.





ವಾರದ ಶುರುವಿನಲ್ಲಿ ವ್ಯಾಪಾರ ಮಾಡುವವರಿಗೆ ಉತ್ತಮ ಪ್ರಗತಿ ಇದೆ. ಉದ್ಯೋಗ ಜೀವನ ಆರಂಭಿಸಬೇಕು ಅಂತಿರುವವರಿಗೆ ಉತ್ತಮ ಅವಕಾಶ. ಹಲವು ಬಗೆಯಲ್ಲಿ ಯಶಸ್ಸು ದೊರೆಯಲಿದೆ. ವೈವಾಹಿಕ ಜೀವನದಲ್ಲಿ ಸಂತೋಷಪಡಲಿದ್ದೀರಿ. ಸಂಗಾತಿ ಜೊತೆ ಭಿನ್ನಾಭಿಪ್ರಾಯ ಇದ್ದಲ್ಲಿ ನಿವಾರಣೆ ಆಗುತ್ತದೆ. ಮಕ್ಕಳ ಪ್ರಗತಿ ಕಡೆಗೆ ಹೆಚ್ಚಿನ ಗಮನ ನೀಡುತ್ತೀರಿ. ಶುಭದಿನ: 31. ಕಾಲಭೈರವನ ಸೇವೆ ಮಾಡಿರಿ.





ನಿಮ್ಮ ಪ್ರೀತಿಪಾತ್ರರ ಬಾಂಧವ್ಯ ಗಟ್ಟಿಯಾಗಲಿದೆ. ವಾರದ ಆರಂಭದಲ್ಲಿ ನಿಮ್ಮ ಪಾಲಿಗೆ ಅದೃಷ್ಟ ಇದೆ. ದೊಡ್ಡ ಪ್ರಶಸ್ತಿಗೆ ಪಾತ್ರರಾಗಲಿದ್ದೀರಿ. ಉದ್ಯೋಗ ಹುಡುಕುತ್ತಿರುವವರಿಗೆ ಯಶಸ್ಸು ದೊರೆಯಲಿದೆ. ವೃತ್ತಿ ಜೀವನದಲ್ಲಿ ಉತ್ತಮ ಫಲಿತಾಂಶ ದೊರೆಯಲಿದೆ. ಇಂಟರ್‌ವ್ಯೂಗಳಲ್ಲಿ ಯಶಸ್ಸು ಸಿಗಲಿದೆ. ವೈವಾಹಿಕ ಜೀವನ ಸಂತುಷ್ಟವಾಗಿರುತ್ತದೆ. ಶುಭದಿನ: 29. ಮಹಾಗಣಪತಿಗೆ ದೂರ್ವಾರ್ಚನೆ ಮಾಡಿರಿ.





ವಾರದ ಶುರುವಿನಲ್ಲಿ ಭೂ ವಿಚಾರದಲ್ಲಿ ಲಾಭ ಪಡೆದುಕೊಳ್ಳುವ ಅವಕಾಶ ಹೆಚ್ಚಿದೆ. ಆಸ್ತಿ ಖರೀದಿ ಮಾಡಲು ಅನುಕೂಲಕರ ಸನ್ನಿವೇಶ ಇದೆ. ಆರೋಗ್ಯದಲ್ಲಿ ಏರುಪೇರು ಕಾಣಿಸಿಕೊಳ್ಳಲಿದೆ. ಕೌಟುಂಬಿಕ ವಿಚಾರದಲ್ಲಿ ಸಣ್ಣ ಪುಟ್ಟ ಸಮಸ್ಯೆ ಎದುರಾಗಲಿದೆ. ಆಧ್ಯಾತ್ಮಿಕ ವಿಚಾರದ ಕಡೆಗೆ ಒಲವು ಹೆಚ್ಚಲಿದೆ. ಅಗತ್ಯ ಇರುವವರಿಗೆ ನೆರವಿನ ಹಸ್ತ ಚಾಚಲಿದ್ದೀರಿ. ಶುಭದಿನ: 28. ಚಂಡಿ ಪಾರಾಯಣ ಮಾಡಿರಿ.




ಅಂದುಕೊಂಡಂಥ ಫಲಿತಾಂಶವನ್ನು ಸಾಧಿಸಲಿದ್ದೀರಿ. ಚೈತನ್ಯದಿಂದ ಕಾಣಿಸಿಕೊಳ್ಳಲಿದ್ದೀರಿ. ವೃತ್ತಿಪರ ಗುರಿಯನ್ನು ಮುಟ್ಟಲು ಉತ್ಸಾಹದಿಂದ ಕೆಲಸ ಮಾಡಲಿದ್ದೀರಿ. ನಿಮ್ಮ ಪರಿಶ್ರಮವನ್ನು ಉದ್ಯೋಗ ಸ್ಥಳದಲ್ಲಿ ಮೇಲಧಿಕಾರಿಗಳು ಮೆಚ್ಚುತ್ತಾರೆ. ಹಣಕಾಸಿನ ಸಂಗತಿಗಳಲ್ಲಿ  ಮೇಲುಗೈ ಸಾಧಿಸಲಿದ್ದೀರಿ. ವಿರೋಧಿಗಳಿಗೆ ತಕ್ಕ ಪ್ರತ್ಯುತ್ತರವನ್ನು ನೀಡಲಿದ್ದೀರಿ. ಶುಭದಿನ: 30. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ಷೇರು ವ್ಯವಹಾರದಲ್ಲಿ ಹೆಚ್ಚಿನ ಲಾಭ ಕಾಣುವಿರಿ. ಕಾನೂನು ವಿಚಾರದಲ್ಲಿ ಪ್ರಗತಿ ಇದೆ. ವಿರೋಧಿಗಳ ವಿರುದ್ಧ ಮೇಲುಗೈ ಸಾಧಿಸುವಿರಿ. ವ್ಯಾಪಾರದಲ್ಲಿ ಬಿಡುವಿಲ್ಲದಷ್ಟು ಕೆಲಸ ಕಾರ್ಯಗಳು ಬರಲಿವೆ. ಹಲವು ಕ್ಷೇತ್ರದಲ್ಲಿ ನೀವು ಅಂದುಕೊಂಡಂಥ ಫಲಿತಾಂಶವನ್ನು ಸಾಧಿಸಬಹುದು. ಆರೋಗ್ಯ ಹಾಗೂ ದೈಹಿಕ ದೃಢತೆ ಉತ್ತಮವಾಗಿರುತ್ತದೆ. ಶುಭದಿನ: 28. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮ ಫಲಿತಾಂಶ ಪಡೆಯುವಿರಿ. ಬೌದ್ಧಿಕ ಸಾಮರ್ಥ್ಯ ವೃದ್ಧಿ ಆಗಲಿದೆ. ಹೆಚ್ಚುವರಿ ಆದಾಯ ನಿರೀಕ್ಷೆ ಮಾಡಬಹುದು. ನಿಮ್ಮ ಜೀವನಮಟ್ಟ ಹೆಚ್ಚಿಸಿಕೊಳ್ಳಲು ಶ್ರಮಿಸುತ್ತೀರಿ. ವಾರದ ದ್ವಿತೀಯಾರ್ಧದಲ್ಲಿ ದೊಡ್ಡ ಯಶಸ್ಸು ನಿಮ್ಮ ಪಾಲಿಗೆ ದೊರೆಯಲಿದೆ. ವಿದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ನೇಹಿತರಿಂದ ಶುಭವಾರ್ತೆ ಕೇಳಲಿದ್ದೀರಿ. ಶುಭದಿನ: 31. ದಕ್ಷಿಣಾಮೂರ್ತಿ ಸ್ತೋತ್ರ ಪಠಣ ಮಾಡಿರಿ.